ಓ.ಎಸ್ ನಂ.14/2021 ಪಿ.ಡಬ್ಲೂಃ 2

ದಿನಾಂಕಃ 13.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಯರ ಪರವಾಗಿ ಶ್ರೀ.ಡಿ.ಬಿ.ಡಿ. ವಕೀಲರಿಂದ

ಯಾವ ಯಾವ ದಿವಸ ಏನೇನು ವ್ಯವಹಾರ ನಡೆದಿದೆ ಎಂದು ನನಗೆ ನೆನಪಿಲ್ಲ. ಎಷ್ಟು ಕ್ರಯ ಪತ್ರಗಳ ಪ್ರಕಾರ ತಿಮ್ಮಪ್ಪಗೌಡರವರು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟೆಷ್ಟು ಜಮೀನುಗಳನ್ನು ಹಾಗೂ ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನಿಮಗೆ ಹೇಳಲು ಬರುತ್ತಾ ಎಂದರೆ ಸಾಕ್ಷಿ ಬೇಡಿಗನಹಳ್ಳಿ ಗ್ರಾಮದ ಸ.ನಂ.20 ರಲ್ಲಿ ತಿಮ್ಮಪ್ಪಗೌಡರವರು 4-5 ಎಕರೆ ಜಮೀನನ್ನು ಬಿದರಕ್ಕ ಗ್ರಾಮದ ಮುಸ್ಲಿಂ ಜನಾಂಗದವರಿಂದ ಖರೀದಿ ಮಾಡಿರುತ್ತಾರೆ, ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. 1ನೇ ಪ್ರತಿವಾದಿಯ ಗಂಡ ತಿಮ್ಮಪ್ಪಗೌಡರವರು ಶಿಕ್ಷಕರಾದ ಮೇಲೆ ಈಗ ನಾನು ಹೇಳಿದ ಆಸ್ತಿಯನ್ನು ಬಿಟ್ಟು ಬೇರೆ ಯಾವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಿಮ್ಮಪ್ಪಗೌಡ ಹಾಗೂ ಹೊನ್ನೇಗೌಡ ರವರಿಗೆ ಯಾವ ಯಾವ ಊರಿನಲ್ಲಿ ಜಮೀನುಗಳಿವೆ ಎಂದರೆ ಬೇಡಿಗನಹಳ್ಳಿ , ಸೀಬಳ್ಳಿ , ಹಾನಗಲ್ಲು ಗ್ರಾಮಗಳಲ್ಲಿ ಆಸ್ತಿಗಳು ಇವೆ. ತಿಮ್ಮಪ್ಪಗೌಡ ಹಾಗೂ ವಾದಿಯ ಕುಟುಂಬಕ್ಕೆ ಅರಕಲಗೂಡು ತಾಲ್ಲೂಕು ಅಂಕನಹಳ್ಳಿ ಗ್ರಾಮದಲ್ಲಿಯಾ ಸಹಾ ಆಸ್ತಿಗಳಿವೆ ಎಂದರೆ ಸಾಕ್ಷಿ ಸ್ವಲ್ಪ ಇರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನಗೆ ಬೇಡಿಗನಹಳ್ಳಿ ಹಾಗೂ ಹಾನಗಲ್ಲು ಗ್ರಾಮಗಳಲ್ಲಿ ಆಸ್ತಿಗಳು ಇವೆ. ಹಾನಗಲ್ಲು ಗ್ರಾಮದ ಸ.ನಂ.20/2 ಮತ್ತು 20/3 ರಲ್ಲಿ ನನಗೆ ಆಸ್ತಿಗಳು ಇವೆ. ಸ.ನಂ. 20/3 ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿ ಅದು ಪಿತ್ರಾರ್ಜಿತವಾಗಿ ಬಂದಿದ್ದು ಎಂದು ನುಡಿಯುತ್ತಾರೆ.

ಸ.ನಂ. 20/3 ಮೂಲತಹ ವಾದಿ ಮತ್ತು ಪ್ರತಿವಾದಿಯ ಮುತ್ತಜ್ಜ ಹೋರಿಗೌಡ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ.ನಂ.20/3 ರಲ್ಲಿ ವಾದಿ ಮತ್ತು ಪ್ರತಿವಾದಿಯರಿಗೂ ಸಹಾ ಹಕ್ಕು ಇದೆ ಎಂದರೆ ಸರಿಯಲ್ಲ. ಹಾನಗಲ್ಲು ಗ್ರಾಮದ ಸ.ನಂ.20/6 ಆಸ್ತಿಯು ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ್ದರೂ ಸಹಾ ನಾನು ಮೋಸದಿಂದ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಸದರಿ ಆಸ್ತಿಯ ಖಾತೆ ನಮ್ಮ ಹೆಸರಿಗೆ ಆಗಿಲ್ಲ, ಅದು ಮರೀಗೌಡರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸ.ನಂ. 20/3ರ ಖಾತೆ ನನ್ನ ಹೆಸರಿನಲ್ಲಿ ಇದೆ . ಸ.ನಂ.20/3 ಕ್ಷೇತ್ರ 1.14 ಪೈಕಿ 26 ಗುಂಟೆ ಆಸ್ತಿ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಹಾನಗಲ್ಲು ಗ್ರಾಮದ ಸ.ನಂ.209/7 ರಲ್ಲಿ ತೋಟ ಇದೆ ಎಂದರೆ ಸರಿ. ಸ.ನಂ.209/7 ರಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಹಿಸ್ಸೆ ಇದೆ ಎಂದರೆ ಸಾಕ್ಷಿ ಸದರಿ ಆಸ್ತಿ ಹೋರಿಗೌಡರವರಿಗೆ ಸೇರಿದ್ದು ಅವರ ಮೂರು ಜನ ಮಕ್ಕಳಿಗೂ ಸಹ ಇದೆ ಎಂದು ನುಡಿಯುತ್ತಾರೆ. ಸ.ನಂ.209/7 ರ ಆಸ್ತಿಯ ಸ್ವಾಧೀನದಲ್ಲಿ ನಾನೇ ಇರುತ್ತೇನೆ. ಸ.ನಂ. 20/3 ರಲ್ಲಿಯೂ ಸಹಾ ನಾನೇ ಸ್ವಾಧೀನದಲ್ಲಿರುತ್ತೇನೆ.

ಸ.ನಂ.20/6 ಮತ್ತು 20/3 ರಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಹಿಸ್ಸೆ ಇದೆ ಎಂದರೆ ಸಾಕ್ಷಿ ಮೂಲತಹ ಆ ಆಸ್ತಿಗಳು ನಮ್ಮ ಪೂರ್ವಜರಾದ ಮರೀಗೌಡ ಬಿನ್ ಕಾಳೇಗೌಡರವರ ಹೆಸರಿನಲ್ಲಿದುದ, ಅವರು ತೀರಿಕೊಂಡ ನಂತರ ಸುಮಾರು 30 ವರ್ಷಗಳಿಂದ ನನ್ನ ತಂದೆ ಸ.ನಂ.20/3ರ ಆಸ್ತಿಯ ಕಂದಾಯ ಕಟ್ಟುತ್ತಾ ಬಂದಿದ್ದು, ಅವರು ತೀರಿಕೊಂಡ ನಂತರ ಸದರಿ ಆಸ್ತಿಯ ಖಾತೆ ನನ್ನ ಹೆಸರಿಗೆ ಆಗಿರುತ್ತದೆ, ಅದರೆ ಈ ಮೂಲ ಆಸ್ತಿಗಳು ಹೋರಿಗೌಡ ಮತ್ತು ಶಿವಯ್ಯರವರಿಗೆ ಸಂಬಂಧಿಸಿದ ಆಸ್ತಿಗಳಾಗಿದ್ದು, ಹೋರಿಗೌಡನ ಮಕ್ಕಳಾದ ತಿಮ್ಮಪ್ಪಗೌಡ, ಸುಬ್ಬೇಗೌಡ ಮತ್ತು ಗೋವಿಂದೇಗೌಡರವರಿಗೆ ಹಾಗೂ ಶಿವಯ್ಯನ ಮಗನಾದ ನನಗೆ ಪಾಲು ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈ ಪ್ರಕಾರ ಹೋದರೆ ಸ.ನಂ.20/6 ರಲ್ಲಿ ನನಗೂ ಸಹಾ ಹಕ್ಕು ಇದೆ ಎಂದು ನುಡಿಯುತ್ತಾರೆ. ಸ.ನಂ.20/6 ಕ್ಕೆ ಸಂಬಂಧಿಸಿದಂತೆ ನಾನು ಸಕಲೇಶಪುರದ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದೆ ಎಂದರೆ ಸರಿ. ಆರ್.ಟಿ.ಐ. ಅಪೀಲು ನಂ.98/2010-11 ರಲ್ಲಿ ಉಪವಿಭಾಗಾದಿಕಾರಿಗಳು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಅದೇಶ ಮಾಡಿದ್ದು, ಆ ಪ್ರಕಾರ ನೀವೇನಾದರೂ ಸ.ನಂ.20/6ಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸ.ನಂ.20/3 ರಲ್ಲಿ ಖಾತೆ ನನ್ನ ಹೆಸರಿಗೆ ಆಗಿದ್ದರಿಂದ ಸ.ನಂ.20/6ನೇ ಆಸ್ತಿ

ಹೋರಿಗೌಡರವರ ಮೂರು ಜನ ಮಕ್ಕಳಿಗೆ ಹೋಗಬೇಕು ಎನ್ನುವ ಉದ್ದೇಶದಿಂದ ನಾನು ಯಾವುದೇ ಅಪೀಲು ಮಾಡಿಲ್ಲ ಎಂದು ನುಡಿಯುತ್ತಾರೆ.

ಪಾಪೇಗೌಡ ಬಿನ್ ಸುಬ್ಬೇಗೌಡ ಎಂದರೆ ನನ್ನ ದೊಡ್ಡಪ್ಪನ ಮೊಮ್ಮಗ. ಶ್ರೀನಿವಾಸ ನಮ್ಮ ದೊಡ್ಡಪ್ಪನ ಮೊಮ್ಮಗ. ಸದರಿ ಪಾಪೇಗೌಡರವರು ಈ ಪ್ರಕರಣದ ವಾದಿ ಹಾಗೂ 1ನೇ ಪ್ರತಿವಾದಿ ಹಾಗೂ ಇತರರ ವಿರುದ್ಧ ಅ.ದಾವೆ ನಂ.174/2010 ರಂತೆ ವಿಭಾಗ ಕೋರಿ ಅಧಿಕ ಸಿವಿಲ್ ನ್ಯಾಯಾಲಯ, ಹೊಳೆನರಸೀಪುರದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸ.ನಂ.20/6 ರ ಆಸ್ತಿ ಅಸಲು ದಾವೆ ನಂ.174/2010 ರಲ್ಲಿ ಸೇರಿಸಲಾಗಿತ್ತು ಎಂದರೆ ಗೊತ್ತಿಲ್ಲ. ಹಾನಗಲ್ಲು ಗ್ರಾಮದ ಸ.ನಂ.20/6, 20/4 , 20/7 ಹಾಗೂ 20/8 ಗಳಿಗೆ ಸಂಬಂಧಪಟ್ಟಂತೆ ಅಸಲು ದಾವೆ ನಂ.174/2010 ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ನಾನು ಹಾನಗಲ್ಲು ಸ.ನಂ.20/4 ರ ಸ್ವಾಧೀನದಲ್ಲಿದ್ದೇನೆ ಎಂದರೆ ಸಾಕ್ಷಿ 26 ಗುಂಟೆ ಕ್ಷೇತ್ರದ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಸ.ನಂ.20/7 ರಲ್ಲಿ 16 ಗುಂಟೆ ಸ್ವಾಧೀನದಲ್ಲಿ ನಾನೇ ಇದ್ದೇನೆ ಎಂದರೆ ಸರಿಯಲ್ಲ. ಹಾನಗಲ್ಲು ಗ್ರಾಮದ ಸ.ನಂ.ಗಳಿಗೆ ಪ್ರತಿವಾದಿಗಳು ಹೆಸರು ದಾಖಲಿಸಿಕೊಳ್ಳಲು ನಾನು ಸಹಕರಿಸದೇ ಇರುವುದರಿಂದ ನಾನೇ ವಾದಿಯರಿಂದ ಈ ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಯಾವ ಯಾವ ಸ.ನಂ.ಗಳಿಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಾನಗಲ್ಲು, ಸೀಬಳ್ಳಿ, ಹಾಗೂ ಅಂಕನಹಳ್ಳಿ ಗ್ರಾಮಗಳಲ್ಲಿಯ ಎಲ್ಲಾ ಆಸ್ತಿಗಳನ್ನು ವಾದಿ ಈ ದಾವೆಯಲ್ಲಿ ಸೇರಿಸಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ನನಗೆ ಇಲ್ಲ. ಹಾನಗಲ್ಲು ಗ್ರಾಮದಲ್ಲಿನ ಯಾವ ಜಮೀನುಗಳಲ್ಲಿ ವಾದಿ ಉಳುಮೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು 2ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ತಿಮ್ಮಪ್ಪಗೌಡರವರು ತೀಕೊಂಡ ನಂತರ 2ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ತಿಮ್ಮಪ್ಪಗೌಡರವರು ತೀರಿಕೊಂಡು 6 ವರ್ಷಗಳಾಗಿವೆ. ತಿಮ್ಮಪ್ಪಗೌಡರ ಸ್ವಯಾರ್ಜಿತ ಆಸ್ತಿಗಳಲ್ಲಿ ಹೇಗಾದರೂ ಮಾಡಿ ವಾದಿಗೆ ಪಾಲು ಕೊಡಿಸಬೇಕು ಎನ್ನುವ ಉದ್ದೇಶದಿಂದ ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಪ್ಪಗೌಡ ಹಾಗೂ 2ನೇ ಪ್ರತಿವಾದಿ ಸ್ವಯಾರ್ಜಿತವಾಗಿ ಗಳಿಸಿದ ಆಸ್ತಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಕೆಲಸಕ್ಕೆ ಸೇರಿದಾಗಿನಿಂದ ಕುಟುಂಬ ಸಮೇತವಾಗಿ ಹೊರಗಡೆ ವಾಸವಾಗಿದ್ದರು. ವಾದಿಗೆ ಎಷ್ಟು ಸಂಭಾವನೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ವಾದಿಗೆ ಬರುವ ಸಂಬಳದಲ್ಲಿ

ಕುಟುಂಬವನ್ನು ಸಾಗಿಸುವುದು ಕಷ್ಟವಾಗುತ್ತಿತ್ತು ಎಂದರೆ ಸರಿಯಲ್ಲ. ವಾದಿಗೆ ಕುಟುಂಬ ಸಾಗಿಸಲು ಸಂಬಳ ಸಾಕಾಗುತ್ತಿರಲಿಲ್ಲ, ಹೀಗಾಗಿ ತಿಮ್ಮಪ್ಪಗೌಡರವರ ಆಸ್ತಿ ಖರೀದಿಸಲು ಯಾವುದೇ ಸಹಾಯ ಮಾಡುವ ಪರಿಸ್ಥಿತಿಯಲ್ಲಿ ಇರದೇ ಇದ್ದರೂ ಸಹಾ ಸಹಾಯ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಪ್ಪಗೌಡರವರು ಆಸ್ತಿಗಳನ್ನು ಖರೀದಿಸಲು ವಾದಿಯಿಂದ ಯಾವುದೇ ಸಹಾಯ ಪಡೆದಿಲ್ಲ ಎಂದರೆ ಸರಿಯಲ್ಲ. ಜಮೀನಿನ ವಿಚಾರಗಳಲ್ಲಿ ನನಗೂ ಮತ್ತು ಪ್ರತಿವಾದಿಯರಿಗೂ ದ್ವೇಷ ಇದೆ ಎಂದರೆ ಸರಿಯಲ್ಲ. ಅಸಲು ದಾವೆ ನಂ.174/2010 ದಾವೆಯಲ್ಲಿ ವಾದಿ ಮತ್ತು ತಿಮ್ಮಪ್ಪಗೌಡರವರಿಗೆ 3/4 ಹಿಸ್ಸೆ ಆಗಿದ್ದು ಅದರ ಮೇಲೆ ಎಫ್.ಡಿ.ಪಿ.ನಂ.2/2016 ಅಧಿಕ ಸಿವಿಲ್ ನ್ಯಾಯಾಲಯದ ಮುಂದೆ ಚಾಲ್ತಿಯಲ್ಲಿದ್ದು, ಆ ಪ್ರಕರಣದಲ್ಲಿ ನಾನು ಸಹಾ ಪಕ್ಷಗಾರನಿದ್ದು, ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಕುಟುಂಬದಲ್ಲಿ ಈಗಾಗಲೇ ಅ.ದಾವೆ ನಂ174/2010 ರ ದಾವೆಯಲ್ಲಿ ವಿಭಾಗ ಆಗಿದ್ದರೂ ಸಹಾ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಈ ಸುಳ್ಳು ದಾವೆ ಸಲ್ಲಿಸಿದ್ದು, ನಾನು ಅವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.